ಮಸೂದೆಯನ್ನು ತರಾತುರಿಯಿಂದ ತರುತ್ತಾರೆ. ತಾವೂ ಇದಕ್ಕೆ ಪಾಲುದಾರರಾಗುತ್ತೀರಿ ತಾವು ಇದಕ್ಕೆ ಪರವಾನಿಗೆ ಕೊಡುತ್ತೀರಿ ಎಂದು ನಾನು ಅಂದುಕೊಂಡಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ:- ಅಧ್ಯಕ್ಷರೇ, ವಿಧಾನಸಭಾ ಅಧ್ಯಕ್ಷರಾಗಿದ್ದ ಶ್ರೀ ಚಂದ್ರೇಗೌಡರು ಈ ವಿಷಯ ಹೇಳುತ್ತಾರೆಂದು ನಾನು ತಿಳಿದು ಕೊಂಡಿರಲಿಲ್ಲ. ಏಕೆಂದರೆ 74ನೇ ವಿಧಿಯ ಹೆಡ್ಡಿಂಗ್ ಏನಿದೆ ಎಂದರೆ - Notice of motion for leave to introduce a private member's Bill, ಎಂದು;

ಈ ಸಬ್‌ಕ್ಲಾಸ್ 2 ಏನು ಹೇಳುತ್ತದೆ? ಖಾಸಗಿ ಸದಸ್ಯರು ವಿಧೇಯಕ ಮಂಡಿಸಬೇಕಾದರೆ 7 ದಿವಸದ ಈ ನಿಯಮ ಅನ್ವಯಿಸುತ್ತದೆ. ಸರ್ಕಾರೀ ಮಸೂದೆಗೆ ಅನ್ವಯಿಸುವುದಿಲ್ಲ. ಅದ್ದರಿಂದ ಈಗಿಷ್ಟೇ ಪ್ರಶ್ನೆ ಇರುವುದು; ಈ ವಿಧಾನಸಭೆಗೆ ಸಂವಿಧಾನದ 16(4) ಮತ್ತು 15(4)ರಲ್ಲಿ ದತ್ತವಾಗಿರುವ ಏನು ಸವಲತ್ತುಗಳಿವೆ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ನೌಕರಿಯಲ್ಲಿ ಕೊಡುವ ಶಾಸನ ಮಾಡುವ ಅಧಿಕಾರ ಇದೆಯೋ ಇಲ್ಲವೊ ಎಂಬುದಷ್ಟೆ. ಅದಕ್ಕೆ ಅಧಿಕಾರ ಇದೆಯೆಂದು ನಮ್ಮ ಸಂವಿಧಾನದಲ್ಲಿ ನಮೂದಿಸಲಾಗಿದೆ. ಆದ್ದರಿಂದ ಈ ವಿಧೇಯಕವನ್ನು ಮಂಡನೆ ಮಾಡುವ ಘಟ್ಟದಲ್ಲಿ ಯಾವರೀತಿಯ ವಿರೋಧವನ್ನೂ ಪರಿಗಣಿಸಲು ಸಾಧ್ಯವಿಲ್ಲ ಎಂದು ನಾನು ಅರಿಕೆ ಮಾಡುತ್ತೇನೆ.

ಶ್ರೀ ಬಿ. ಎಸ್. ಯುಡಿಯೂರಪ್ಪ:- ಸ್ವಾಮಿ, ತರಾತುರಿಯಲ್ಲಿ ಈ ಬಿಲ್‌ನ್ನು ಇಂಟ್ರಡ್ಯೂಸ್ ಮಾಡಿ ರಾಜಕೀಯ ದೊಂಬರಾಟ ಮಾಡುವುದಕ್ಕೆ ಹೊರಟಿದ್ದಾರೆ. ಹಿಂದುಳಿದವರಿಗೆ ನ್ಯಾಯ ಒದಗಿಸಿಕೊಡಬೇಕೆಂಬ ಉದ್ದೇಶ ಇವರಿಗೆ ಇಲ್ಲ. 80 ಪರ್ಸ್‌ಂಟ್ ಮೀಸಲಾತಿ ಕೊಡುವುದಕ್ಕೆ ನಮಗೆ ಅಭ್ಯಂತರ ಇಲ್ಲ. ಆದರೆ ಇವತ್ತು ಕೊನೇದಿವಸ. ಇವರು ಮಾಡಿದ್ದ ಅನ್ಯಾಯವನ್ನು ಮುಚ್ಚಿ ಕೊಳ್ಳುವುದಕ್ಕೋಸ್ಕರ, ಯಾವುದು ಚಾರಿಗೆ ತರಲು ಸಾಧ್ಯವಿಲ್ಲವೆಂಬುದು ಗೊತ್ತಿದ್ದರೂ ಇದನ್ನು ಮಂಡನೆ ಮಾಡಲು ಹೊರಟಿದ್ದೀರಿ. ಇದನ್ನು ವಿರೋಧಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಭಾಜಪ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್:- ಇವತ್ತು ಸದನ ಮುಗಿಸಬೇಡಿ. ಸಮಗ್ರವಾಗಿ ಚರ್ಚೆಯಾಗಬೇಕಾಗಿದೆ. ಸದನ ಮುಂದುವರಿಸಿ. ನೀವು ತಂದಿರುವುದು ಕೊನೇ ದಿವಸ.

ಶ್ರೀ ರಾಮಕೃಷ್ಣ ಹೆಗಡೆ:- ಈ ವಿಧೇಯಕವನ್ನು ಇಲ್ಲಿ ಮಂಡಿಸದೇ ಇದ್ದರೆ ಆಗತಕ್ಕಂತಹ ಅನಾಹುತವೇನು?

ಶ್ರೀ ವಾಟಾಳ್ ನಾಗರಾಜ್:- ಕೊನೇ ದಿವಸ ತಂದಿರುವುದು. ಹಿಂದುಳಿದವರನ್ನು ಉದ್ಧಾರ ಮಾಡತಕ್ಕಂತಹ ವ್ಯವಸ್ಥೆ ಇದಲ್ಲ. ಸರಕಾರದ ನೀತಿ ಸರಿಯಲ್ಲ ಆದ್ದರಿಂದ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಖಂಡಿತ ತಾವು ಒಪ್ಪಿಗೆ ಕೊಡಬೇಡಿ.

(ಗೊಂದಲ)